## ಸರಳ ಜೀವನಕ್ಕೆ ಜೈ

ಇತ್ತೀಚೆಗಷ್ಟೇ ಟಾಟಾಸ್ಕೈನಲ್ಲಿ ಸರಳ–ಜೀವನ ವಾಹಿನಿಯು ಸೇರಿಕೊಂಡಿರುವುದು ಹರ್ಷದ ಸಂಗತಿ. ಭಾರತೀಯ ಸಂಸ್ಕೃತಿಯನ್ನು ಎತ್ತಿ ಹಿಡಿದು, ಜನಸಾಮಾನ್ಯರಿಗೆ ಸರಳವಾಗಿ ತಿಳಿಹೇಳುವ ವಾಹಿನಿಯು ಬೇರೊಂದಿಲ್ಲ.

ಪುರಾತನ ದೇವಾಲಯಗಳು, ಕೋಟೆ ಹೇಳಿದ ಕತೆಗಳಂತೂ ನಮ್ಮನ್ನು ಅತ್ತಿತ್ತ ಅಲುಗಾಡಲು ಬಿಡದೆ ಕೋಟೆಯೊಳಗೆ ಗಿರಕಿ ಹೊಡೆಯುವಂತೆ ಮಾಡುತ್ತವೆ. ಕುರುಕ್ಷೇತ್ರ ಯುದ್ಧದಲ್ಲಿ ಗತಿಸಿದ ವ್ಯಕ್ತಿಗಳ ಅಂತಿಮ ದಿನಗಳನ್ನು ವಿಶ್ಲೇಷಣೆಯಂತೂ ಬಹಳ ಸೊಗಸಾಗಿ ಬರುತ್ತಿದೆ. ನಮ್ಮ ತಿಳಿವಳಿಕೆಗೆ ಬಾರದ ಅನೇಕ ಚಿಂತನೆಗಳು ಮನಸ್ಸಿನಲ್ಲಿ ಪುಟಿದೇಳುವಂತೆ ಮಾಡುತ್ತವೆ. ಹೊಸ ವಿಷಯಗಳೂ ಅಡಕವಾಗಿವೆ. ಗೀತೋಪದೇಶದ ಶ್ಲೋಕಗಳಿಂದ ಪ್ರಾರಂಭವಾಗುವ 'ಅಂತಿಮ ದಿನಗಳು' ಅಬಾಲ ವೃದ್ಧರಾದಿಯಾಗಿ ಎಲ್ಲರೂ ಕುಳಿತು ವೀಕ್ಷಿಸುತ್ತಿರುತ್ತೇವೆ. 'ಅಜ್ಜಿ ಹೇಳಿದ ಕಥೆ'ಯು ಚಿತ್ರ ಸಮೇತ ಬರುವ ನೀತಿ ಕಥೆಗಳಾಗಿದ್ದು, ಇಂದಿನ ಮಕ್ಕಳಿಗೆ ಅವಶ್ಯಕವಾಗಿ ಬೇಕೇ ಬೇಕು. 'ನಮ್ಮ ಆಹಾರ' ಪೇಟೆಯಲ್ಲಿ ಸಿಗುವ ಬಣ್ಣದ ಆಹಾರಗಳಿಗೆ ಮಾರುಹೋಗದಂತೆ ಎಚ್ಚರಿಕೆ ನೀಡುತ್ತಿರುವುದು ಸ್ತುತ್ಯರ್ಹ.

–ಜೈ ಜೈ

## ಕಾಮಕ್ಕೆ ಫುಲ್‌ಸ್ಟಾಪ್ ಇಡಿ

ಗಂಡ–ಹೆಂಡತಿಯರ ಹಳಸಲು ಸಂಬಂಧಗಳು, ಅಶ್ಲೀಲ ಎನಿಸುವಂತಹ, ಮುಜುಗರ ತರಿಸುವ ದ್ವಂದ್ವಾರ್ಥದ ಮಾತುಗಳಿಂದ 'ಝೀ' ಕನ್ನಡದ 'ಕಾಮಿಡಿ ಕಿಲಾಡಿ'ಗಳು ಕಾರ್ಯಕ್ರಮವು ದುರ್ಬಲವಾಗುತ್ತಿದೆ. ಉತ್ತಮ ಕಾರ್ಯಕ್ರಮ ಎನಿಸಿದ್ದ ಇದು ಒಂದೇ ವಿಷಯದ ಸುತ್ತ ಬಾಲವಿಲ್ಲದ 'ಗಾಳಿಪಟ'ದ ರೀತಿ ಗಿರಕಿ ಹೊಡೆಯುತ್ತಿದೆ. ಜಗ್ಗಣ್ಣ–ರಕ್ಷಿತಮ್ಮ–ಭಟ್ಟರೇ, ಅನುಭವಸ್ಥ ತ್ರಿವಳಿ ದಿಗ್ಗಜರಾದ ನೀವೇ ನೋಡುಗರಾದ ನಮ್ಮನ್ನು ರಕ್ಷಿಸಬೇಕು.

–ಏಕನಾಥ್ ಬೊಂಗಾಳೆ, ಶಿವಮೊಗ್ಗ

ವಾರದ ಪತ್ರ

## ಸುಳ್ಳುಗಳ ಸುರಳಿ

ಈಗಿನ ಧಾರಾವಾಹಿಗಳನ್ನು ನೋಡುತ್ತಿದ್ದರೆ ನಮಗೆ ತಲೆ ಇಲ್ಲವೋ ಅಥವಾ ಕಥೆಗಳನ್ನು ಬರೆಯುವವರಿಗೆ, ನಿರ್ದೇಶಕರಿಗೆ ತಲೆ ಇಲ್ಲವೋ ಅರ್ಥವಾಗುವುದಿಲ್ಲ. 10 ರಿಂದ 15, ಅಬ್ಬಬ್ಬಾ ಎಂದರೆ 25 ಕಂತಿನೊಳಗೆ ಮುಗಿಸಬಹುದಾದ ಕಥೆಯನ್ನು ಸಾವಿರ ಕಂತು ಮಾಡುವರು.

1. 'ಕಿನ್ನರಿ'ಯಲ್ಲಿ ಮಣಿಯ ತಂದೆ ತಾಯಿ ಬಂದಾಗ, ನಕಲು ದಾಖಲಾತಿಗಳನ್ನು ನೋಡಿ ಕಳಿಸುವರು. ಡಿಎನ್‌ಎ ಟೆಸ್ಟ್ ಮಾಡಿಸಲು ತಲೆ ಇರಲಿಲ್ಲವೆ?

2. 'ನಾಗಿಣಿ'ಯಲ್ಲಿ, ಮದುವೆಯನ್ನು ಪೌರ್ಣಮಿಯ ರಾತ್ರಿ ಮಾಡುವರು. ಇದು ಸರಿಯೇ? ಸೂರ್ಯ ಮುಳುಗಿದ ಮೇಲೆ ತಾಳಿ ಕಟ್ಟುವುದಿಲ್ಲ.

3. 'ಪುಟ್ಟ ಗೌರಿ ಮದುವೆ'ಯಂತೂ ನೋಡುವ ಹಾಗೆಯೇ ಇಲ್ಲ. ಗರ್ಭಿಣಿ ಆದವಳು ಬರಿ ಪಟಾಕಿಗಳಿಂದಲೇ ಎಲ್ಲರನ್ನೂ ಹೆದರಿಸಿ ತಂದೆಯನ್ನು ಕರೆದುಕೊಂಡು ಬರುವಳು. ಇದು ಸಾಧ್ಯವೇ? ಅವರು ಅಷ್ಟು ಪೆದ್ದರೆ?

4. 'ಗಂಗಾ' ಸೀರಿಯಲ್‌ನಲ್ಲಿಯೂ ಏನೂ ವಿಚಾರಿಸದೆ ದೊಡ್ಡಪ್ಪ ಅಂದ ತಕ್ಷಣ ಕಳಿಸಲು ಸಿದ್ಧರಾಗುವರು. ಆ ಲಾಯರ್ ಅಂತೂ ದೇವರಿಗೇ ಪ್ರೀತಿ.

5. ಎಲ್ಲಾ ಸೀರಿಯಲ್‌ಗಳಲ್ಲೂ ಏನಾದರೂ ಹೇಳಲು ಹೋದರೆ 'ಸುಮ್ಮನಿರು' ಎಂದು ಹೆದರಿಸುವರು. ಹೇಳಲು ಬಿಡುವುದಿಲ್ಲ. ನಂತರ ಮಾತನಾಡುವುದನ್ನು ಕೇಳಿಸಿಕೊಳ್ಳದೆ ಬಂದುಬಿಡುವರು. ಯಾರೂ ರೆಕಾರ್ಡಿಂಗ್ ಮಾಡಿಕೊಳ್ಳುವುದು ಇಲ್ಲವೇ ಇಲ್ಲ.

–ಎ.ಪಿ. ರಂಗನಾಥ್, ಮೈಸೂರು

## ರೇಮೋ ಸಂಗೀತ

'ರೇಮೋ' ಎಂಬ ಹೆಸರಿನ ಮೂಲಕವೇ ಮಜಾ ಟಾಕೀಸ್ ಮೂಲಕ ಪರಿಚಿತವಾದ ರೇಖಾ ಮೋಹನ್‌ರವರು ಗಾಯಕಿಯಾಗಿ ಗಮನ ಸೆಳೆಯುತ್ತಿರುವ ಜೊತೆಗೆ ಧಾರಾವಾಹಿಯಲ್ಲಿ ನಟಿಸುವುದರ ಮೂಲಕವೂ ತಮ್ಮ ಪ್ರತಿಭೆಯನ್ನು ಹೊರಹೊಮ್ಮಿಸುತ್ತಿದ್ದಾರೆ. ಅವರ ಸಂಗೀತದ ಪ್ರತಿಭೆಗೆ ಅವರ ಕೌಟುಂಬಿಕ ಪರಿಸರವೂ ಮುಖ್ಯ ಪಾತ್ರ ವಹಿಸುತ್ತದೆ. ಅವರ ಪ್ರತಿಭೆ ಮತ್ತಷ್ಟು ಬೆಳೆಯಲಿ.

–ವಿಭಾ ಮುರಳೀಧರ್, ತುಮಕೂರು

## ಕಿರುತೆರೆಯ ಕಿಡಿ

ಅಕ್ಕ ಧಾರಾವಾಹಿಯ ದೇವಿಕಾ ಪಾತ್ರ ತುಂಬಾ ಅತಿರೇಕದಿಂದ ಕೂಡಿದ್ದು, ದಾಂಪತ್ಯಕ್ಕೆ ರಂಧ್ರ ಕೊರೆಯುವ ಕೆಲಸ ಮಾಡುತ್ತಿದ್ದಾರೆ. ಚಾನೆಲ್‌ಗಳು ಧಾರಾವಾಹಿಗಳು ಅಂಕೆಯನ್ನು ಮೀರದಂತೆ ಕತ್ತರಿ ಹಾಕದೆ ಇದ್ದರೆ ನಿಮ್ಮದು ಸಾಮಾಜಿಕ ಕಳಕಳಿ ಹೇಗಾದೀತು?

ಸಮಾಜದ ಮುಖ್ಯವಾಹಿನಿಯ ಸ್ವಾಸ್ಥ್ಯಕ್ಕೆ ಕಿರುತೆರೆ ಕಿಡಿ ಹಾಕುವ ಪ್ರಯತ್ನ ಮಾಡದೆ ಸಾಮಾಜಿಕ ಜವಾಬ್ದಾರಿಯಿಂದ ಕೆಲಸ ಮಾಡಬೇಕಾಗಿದೆ.

–ಮಾಂತೇಶ ಬಾಗೇವಾಡಿ, ಬಾಗಲಕೋಟ

## ಪ್ರಪಂಚದ ಅದ್ಭುತ ಮಗು?

ಸ್ಟಾರ್ ಸುವರ್ಣದಲ್ಲಿ ಗೀತಾಂಜಲಿ ಧಾರಾವಾಹಿಯಲ್ಲಿ ನಾಯಕ ತನ್ನ ಇಬ್ಬರು ಮಕ್ಕಳನ್ನು ಪ್ರವಾಸ ಕರೆದುಕೊಂಡು ಹೋಗಿರುತ್ತಾನೆ. ಆಗ ಅಕಸ್ಮಾತ್ ಒಬ್ಬ ಮಗಳು ನೀರಿಗೆ ಬಿದ್ದುಬಿಡುತ್ತಾಳೆ. ಅವನ ಹೆಂಡತಿ ಒಂದೇ ಸಮನೆ ಫೋನ್ ಮಾಡುತ್ತಿರುತ್ತಾಳೆ. ಕಾರಣ ಆ ಮಗುವಿನ ಹುಟ್ಟುಹಬ್ಬದ ಶುಭಾಶಯ ಕೋರಲು. ನಾಯಕ ಫೋನ್ ರಿಸೀವ್ ಮಾಡುವುದೆ ಇಲ್ಲ. ಆದರೆ ಅದೇ ಸಮಯಕ್ಕೆ ಒಬ್ಬ ದೊಂಬಾರಾಟದ ತಂದೆ–ಮಗಳು ಕಾಣಿಸಿಕೊಳ್ಳುತ್ತಾರೆ. ಮಗಳು ಥೇಟ್ ನಾಯಕನ ಮಗಳಿನ ಹಾಗೆ ಇರುತ್ತಾಳೆ. ನಾಯಕ ಹಣ ಕೊಟ್ಟು ತಂದೆಯಿಂದ ತದ್ರೂಪಿ ಮಗಳನ್ನು ಪಡೆದು ಊರಿಗೆ ಕರೆದುಕೊಂಡು ಬರುತ್ತಾನೆ. ಇವೆಲ್ಲ ಘಟನೆಗಳು ಕೇವಲ 2–3 ದಿನಗಳದ್ದು ಮಾತ್ರ. ಆದರೆ ವಿಷಯ ಅದಲ್ಲ, ಊರಿಗೆ ಬಂದ ತಕ್ಷಣ ಮನೆಯಲ್ಲಿರುವ ಎಲ್ಲಾ ಸದಸ್ಯರನ್ನು ಆ ಮಗು ಗುರುತು ಹಿಡಿಯುತ್ತದೆ. ಇಂಗ್ಲಿಷ್ ಪದಗಳನ್ನು ಬಳಸುತ್ತದೆ. ಯಾವ ವಿಧದಲ್ಲೂ ತಾಯಿಗೆ ಅನುಮಾನ ಬರುವುದಿಲ್ಲ.

–ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ದೇವರಿಗೂ ತಾಳೆ ಹೂ

ಕಳೆದ ವಾರದ ಸಂಚಿಕೆಯಲ್ಲಿ ತಾಳೆಹೂವಿನ ಬಗ್ಗೆ ವಿವರಣೆ ನೀಡುತ್ತಾ, 'ಇದು ಸಾಮಾನ್ಯವಾಗಿ ಕೆರೆ, ನದಿಯಂಚಿನ ಪೊದೆಗಳಲ್ಲಿ ಬೆಳೆಯುತ್ತದೆ. ಆದರೂ ಇದನ್ನು ಪೂಜೆಗೆ ಮಾತ್ರ ಬಳಸುವುದಿಲ್ಲ' ಎಂದು ನಿರೂಪಕರು ಹೇಳಿದರು. ಆದರೆ ನನಗೆ ತಿಳಿದಂತೆ ಗಾಢವಾದ ಸುವಾಸನೆಯುಳ್ಳ ತಾಳೆಹೂವನ್ನು ಸ್ವರ್ಣಗೌರಿ ಹಾಗೂ ವರಮಹಾಲಕ್ಷ್ಮಿಗೆ ವಿಶೇಷವಾಗಿ ಕೇಶ ಶೃಂಗಾರಕ್ಕೆ ಉಪಯೋಗಿಸುತ್ತಾರೆ.

–ಶ್ರೀನಾಥ್ ಕೊನೇಟಿ, ಬೆಂಗಳೂರು

## ಕಾದಂಬರಿ ಆಧಾರಿತ ಧಾರಾವಾಹಿ ಬರಲಿ

ಈಗ ಪ್ರಸಾರವಾಗುತ್ತಿರುವ ಧಾರಾವಾಹಿಗಳು ಪ್ರಾರಂಭದಲ್ಲಿ ನೋಡಲು ಸಹ್ಯವಾಗಿದ್ದವು. ಮತ್ಸರ, ದ್ವೇಷ, ಸೇಡು, ಕೊಲೆ ಸಂಚು, ಅಪಹರಣ ವಿಷಯಗಳಿಗೆ ಸೀಮಿತವಾಗಿದ್ದ ಧಾರಾವಾಹಿಗಳು ಇತ್ತೀಚೆಗೆ ಇವುಗಳ ಜತೆಯಲ್ಲಿ ದೆವ್ವ–ಭೂತ, ಮಾಟ–ಮಂತ್ರ, ಜ್ಯೋತಿಷ್ಯ, ಪುನರ್‌ಜನ್ಮ, ಹಾವಿನ ಅವತಾರ ಮುಂತಾದ ಮೂಢ ನಂಬಿಕೆಗಳಿಗೆ ಮೊರೆ ಹೋಗುತ್ತಿವೆ. ನೈಜತೆಗೆ ದೂರವಾದ ಕಳಪೆ ಗುಣಮಟ್ಟದ ಕಥೆಗಳಿಂದ ಬೇಸತ್ತ ವೀಕ್ಷಕರು ಕನ್ನಡೇತರ ವಾಹಿನಿಗಳತ್ತ ಒಲವು ತೋರಿಸುತ್ತಿದ್ದಾರೆ. ನಿರ್ಮಾಪಕರು, ನಿರ್ದೇಶಕರು ಎಚ್ಚೆತ್ತು ಕನ್ನಡ ಅಥವಾ ಬೇರೆ ಭಾಷೆಯ ಜನಪ್ರಿಯ ಕಾದಂಬರಿ ಆಧಾರಿತ ಧಾರಾವಾಹಿ ನಿರ್ಮಾಣದತ್ತ ಗಮನಹರಿಸಬೇಕು. ಇಲ್ಲದಿದ್ದಲ್ಲಿ ಕನ್ನಡ ಚಿತ್ರರಂಗಕ್ಕೆ ಬಂದ ಪರಿಸ್ಥಿತಿ ಕನ್ನಡ ಕಿರುತೆರೆಗೂ ಬರಬಹುದು.

–ಡಾ. ಗಿರಿರಾಜ ಕುಲಕರ್ಣಿ, ಬೆಂಗಳೂರು